SCCH – 01
MVC No.7609/2023
RW1

## BEFORE THE MOTOR ACCIDENT CLAIMS TRIBUNAL, CHIEF JUDGE, COURT OF SMALL CAUSES JUDGE, BENGALURU.

**MVC.NO.7609/2023**

**R.W-1**

| | |
|---|---|
| Name | Gayathri |
| Husband’s name | Jayashankar |
| Age | 57 years |
| Occupation | RTO, Chamarajanagara |
| Residence | Chamarajanagara |

**ಸಾಕ್ಷಿಗೆ ದಿನಾಂಕಃ 09.07.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತುಃ**

**ಮುಖ್ಯ ವಿಚಾರಣೆ: 3 ನೇ ಎದುರುದಾರರ ಪರ ವಕೀಲರಾದ ಶ್ರೀ.ಬಿ.ಎಂ.ಆರ್. ರವರಿಂದಃ**

1) ಕಳೆದ 2 ವರ್ಷಗಳಿಂದ ನಾನು ಚಾಮರಾಜನಗರದಲ್ಲಿ ಆರ್.ಟಿ.ಓ ಆಗಿ ಕರ್ತವ್ಯ ಮಾಡುತ್ತಿದ್ದೇನೆ. ಈ ಪ್ರಕರಣದಲ್ಲಿ ನ್ಯಾಯಾಲಯವು ನಮ್ಮ ಕಚೇರಿಗೆ ಒಂದು ಸಮನ್ಸ್ ಕಳುಹಿಸಿತ್ತು ಮತ್ತು ಆ ಸಮನ್ಸ್ ನಲ್ಲಿ ಕೆಎ-51-ಎಬಿ-2229 ಸಂಖ್ಯೆಯ ವಾಹನಕ್ಕೆ ನೀಡಲಾಗಿರುವಂತಹ ಪರ್ಮಿಟ್ ಅನ್ನು ಹಾಜರುಪಡಿಸಬೇಕು ಎಂಬುದಾಗಿ ನಿರ್ದೇಶನವನ್ನು ನೀಡಿತ್ತು.

2) ನ್ಯಾಯಾಲಯದಿಂದ ಆ ರೀತಿಯ ಸಮನ್ಸ್ ನಮ್ಮ ಕಚೇರಿಗೆ ಬಂದ ನಂತರ ನಾವು ನಮ್ಮ ಕಚೇರಿಯ ಗಣಕಯಂತ್ರದಲ್ಲಿ ಪರಿಶೋಧನೆಯನ್ನು

ಮಾಡಿದ್ದೇವೆ.

3) ನಮ್ಮ ಚಾಮರಾಜನಗರದ ಕಚೇರಿಯಲ್ಲಿ ಆ ಪ್ರಕಾರವಾಗಿ ಪರಿಶೀಲನೆಯನ್ನು ಮಾಡಿದಾಗ ಚಾಮರಾಜನಗರದ ಕಚೇರಿಯಿಂದ ಸದರಿ ಕೆಎ-**51**-ಎಬಿ-**2229** ಸಂಖ್ಯೆಯ ವಾಹನಕ್ಕೆ ಯಾವುದೇ ಪರ್ಮಿಟ್ ಅನ್ನು ಯಾವುದೇ ಸಮಯದಲ್ಲಿಯೂ ಕೊಟ್ಟಿರುವುದಿಲ್ಲ ಎಂಬುದು ಕಂಡು ಬಂದಿದೆ. ಸದರಿ ಮಾಹಿತಿಯನ್ನು ನ್ಯಾಯಾಲಯದ ಅವಗಾಹನೆಗೆ ಸಲ್ಲಿಸಿದ್ದೇನೆ.

4) ಸೂಚನೆಃ ಆ ಸಂಬಂಧವಾಗಿ ಈ ಸಾಕ್ಷಿದಾರರು ಹಾಜರುಪಡಿಸಿರುವಂತಹ ಒಂದು ಪತ್ರವನ್ನು **ನಿ.ಆರ್.1** ಎಂದು ಗುರುತಿಸಿದೆ.

**ಪಾಟೀ ಸವಾಲು: ಅರ್ಜಿದಾರರು ಮತ್ತು 2 ನೇ ಎದುರುದಾರರ ಪರ ವಕೀಲರಿಂದಃ**

ಮಾನ್ಯ ವಕೀಲರುಗಳು ಹಾಜರಿದ್ದಾರೆ ಮತ್ತು ಯಾವುದೇ ಪಾಟೀ ಸವಾಲು ಇಲ್ಲ ಎಂದು ನುಡಿದಿದ್ದಾರೆ.

**ಮರು ವಿಚಾರಣೆಃ ಇಲ್ಲ.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ)

**(ಓ.ಹೇ.ಕೇ.ಸ.ಇ)**

**ಮುಖ್ಯ ನ್ಯಾಯಾಧೀಶರು,**
ಲಘು ವ್ಯವಹಾರಗಳ ನ್ಯಾಯಾಲಯ,
ಬೆಂಗಳೂರು.